**ಒ.ಎಸ್.ನಂಬ್ರ: 426/2017 ಪಿ .ಡಬ್ಲ್ಯೂ : 1**

ದಿನಾಂಕ: 05-03-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಶ್ರೀ. ವೈ.ಎನ್ ಕೆ ವಕೀಲರಿಂದ**

ವಾದಿಗೆ 4 ಜನ ಮಕ್ಕಳು. ನಾನು ಕೊನೆಯವಳು. ವಾದಿ ಸುಮಾರು 8-10 ವರ್ಷಗಳ ಹಿಂದೆ ಕುಂದಾಪುರಕ್ಕೆ ಬಂದಿದ್ದರು. ಅದು ದಾವೆ ದಾಖಲಿಸುವ ಕಾಲಕ್ಕೆ ಎಂದರೆ ಸರಿ . ಆನಂತರದಲ್ಲಿ ಬಂದಿರುವುದಿಲ್ಲ . ಕಾಲು ನೋವಿನ ಕಾರಣ ಆಕೆಗೆ ಓಡಾಡಲು ಆಗುವುದಿಲ್ಲ . ಆಕೆಯ ಬುದ್ದಿಶಕ್ತಿ ಹಾಗೂ ಕಿವಿ ಸರಿ ಇರುತ್ತದೆ. ಮಾತನಾಡಿದ್ದನ್ನು ತಿಳಿದುಕೊಳ್ಳುವ ಸಾಮರ್ಥ್ಯ ಇದೆ . ಅನಾರೋಗ್ಯ ಇದ್ದು ಹಾಸಿಗೆ ಹಿಡಿದಿಲ್ಲ . ದಾವೆಗಾಗಿ ದಾಖಲೆಗಳನ್ನು ನಾನು ಓಡಾಡಿ ಪಡೆದಿರುತ್ತೇನೆ . ದಾವಾ ಎ ಶೆಡ್ಯೂಲ್ ಸ್ವತ್ತು ವಾದಿಗೆ ತನ್ನ ತಂದೆಯಿಂದ ಬಂದಿರುತ್ತದೆ. ಅದರ ಸಂಬಂಧ ಪಹಣಿ ಹಾಜರುಪಡಿಸಿದ್ದೇನೆ . ನಿಪಿ 2 ನ್ನು ಹೊರುತುಪಡಿಸಿ ವಾದಿಯ ಹೆಸರಿಗೆ ದಾವಾ ಎ ಶೆಡ್ಯೂಲ್ ಸ್ವತ್ತು ಬಂದಿದೆ ಎಂದು ತೋರಿಸಲು ಬೇರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ . ವಾದಿಗೆ ದಾವಾ ಎ ಶೆಡ್ಯೂಲ್ ಸ್ವತ್ತಿನ ಮೇಲೆ ನ್ಯಾಯಬದ್ದವಾದ ಹಕ್ಕು ಬಂದಿದೆ ಎಂದು ತೋರಿಸಲು ನಿಪಿ 2 ಪೂರಕವಾದ ದಾಖಲೆ ಅಲ್ಲ ಎಂದರೆ ಸರಿ . ನಿಪಿ 2 ಪ್ರಕಾರ ವಾರೀಸು ಮೇರೆಗೆ ವಾದಿಗೆ ದಾವಾ ಎ ಶೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು ಸ್ಥಾಪನೆಯಾಗಿದೆ ಎಂದು ಕಂಡುಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಪದವಿದರೆಯಾಗಿದ್ದು , ಕೃಷಿ ಮಾಡುತ್ತೇನೆ

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**